# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1148 |
| ಸದಸ್ಯರ ಹೆಸರು | : | ಶ್ರೀ ರಘುನಾಥರಾವ್ ಮಲ್ಕಾಪುರೆ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರು) |
| ಉತ್ತರಿಸಬೇಕಾದ ದಿನಾಂಕ | : | 12.03.2021 |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

| ಕ್ರ. ಸಂ | ಚುಕ್ಕೆ ಗುರುತಿಲ್ಲದ ಪ್ರಶ್ನೆ | ಉತ್ತರ |
|---|---|---|
| ಅ | ಬೀದರ್ ಜಿಲ್ಲೆಯಲ್ಲಿ ರೈತರ ಬೆಳೆಹಾನಿ ಸಮೀಕ್ಷೆ ನಡೆಸಲಾಗಿದೆಯೇ; ನಡೆಸಿದ್ದರೆ ಹಾನಿಗೊಳಗಾದ ರೈತರ ಸಂಖ್ಯೆ ಎಷ್ಟು; (ತಾಲ್ಲೂಕುವಾರು, ಎಕರೆವಾರು ಸಂಪೂರ್ಣ ಮಾಹಿತಿ ಒದಗಿಸುವುದು) | ಪ್ರಸಕ್ತ ಸಾಲಿನಲ್ಲಿ, ಬೀದರ್ ಜಿಲ್ಲೆಯಲ್ಲಿ, ಬರ ಪರಿಸ್ಥಿತಿ ಎದುರಾಗದೆ ಇರುವುದರಿಂದ ಬೆಳೆ ಹಾನಿ ಸಮೀಕ್ಷೆ ನಡೆಸುವುದು ಉದ್ಭವಿಸುವುದಿಲ್ಲ. |
| ಆ | ಸಮೀಕ್ಷೆಯಲ್ಲಿ ಪ್ರತಿ ಎಕರೆಗೆ ನಿಗದಿ ಪಡಿಸಿದ ಪರಿಹಾರ ಮೊತ್ತ ಎಷ್ಟು; (ತಾಲ್ಲೂಕುವಾರು, ನೀರಾವರಿ ಹಾಗೂ ಒಣಬೇಸಾಯದ ಬಗ್ಗೆ ಪ್ರತ್ಯೇಕವಾಗಿ ಮಾಹಿತಿ ನೀಡುವುದು) | ಬರ ಪರಿಸ್ಥಿತಿಯಲ್ಲಿ ಉಂಟಾದ ಬೆಳೆ ಹಾನಿಗೆ ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿ ಅನ್ವಯ ಕೆಳಕಂಡಂತೆ ಇನ್ ಪುಟ್ ಸಬ್ಸಿಡಿಯನ್ನು ಪ್ರತಿ ರೈತರಿಗೆ ಗರಿಷ್ಠ ಎರಡು ಹೆಕ್ಟೇರ್‌ಗೆ ಸೀಮಿತಗೊಳಿಸಿ ಪಾವತಿಸಲು ದರ ನಿಗಧಿಪಡಿಸಲಾಗಿದೆ.<br><br>ಮಳೆಯಾಶ್ರಿತ ಬೆಳೆ — ರೂ 6,800/- ಹೆಕ್ಟೇರ್‌ಗೆ<br>ನೀರಾವರಿ ಬೆಳೆ — ರೂ 13,500/- ಹೆಕ್ಟೇರ್‌ಗೆ<br>ಬಹುವಾರ್ಷಿಕ ಬೆಳೆ — ರೂ 18,000/- ಹೆಕ್ಟೇರ್‌ಗೆ |
| ಇ | ಸದರಿ ಬರ ಪರಿಹಾರ ವಿತರಣೆಗಾಗಿ ಕೇಂದ್ರದಿಂದ ಬಿಡುಗಡೆಯಾದ ಮೊತ್ತ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು) | ಪ್ರಸಕ್ತ ಸಾಲಿನಲ್ಲಿ ಬರ ಎಂದು ಘೋಷಣೆಯಾಗದೆ ಇರುವುದರಿಂದ, ಬರ ಪರಿಹಾರಕ್ಕಾಗಿ ಕೇಂದ್ರದಿಂದ ಅನುದಾನ ಬಿಡುಗಡೆಯಾಗಿರುವುದಿಲ್ಲ. |
| ಈ | ಬೀದರ್ ಜಿಲ್ಲೆಯ ರೈತರ ಬೆಳೆ ಹಾನಿಗಳಿಗೆ ಪರಿಹಾರ ಮೊತ್ತ ವಿತರಿಸಲಾಗಿದೆಯೇ ; ವಿತರಿಸಿದ್ದರೆ, ರೈತರ ಸಂಖ್ಯೆ, ಎಕರೆವಾರು ತಾಲ್ಲೂಕುವಾರು ಮಾಹಿತಿ ನೀಡುವುದು ; | ಉದ್ಭವಿಸುವುದಿಲ್ಲ |
| ಉ | ವಾಸ್ತವಿಕವಾಗಿ ರೈತರಿಗೆ ಪ್ರತಿ ಎಕರೆಗೆ ನೀಡಿದ ಪರಿಹಾರ ಮೊತ್ತ ಎಷ್ಟು ; ಇಲ್ಲಿಯವರೆಗೆ ಪರಿಹಾರ ನೀಡಲಾದ ರೈತರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಫಲಾನುಭವಿಗಳವಾರು ನೀರಾವರಿ ಹಾಗೂ ಒಣಬೇಸಾಯದ ಸಂಪೂರ್ಣ ವಿವರ ನೀಡುವುದು) | ಉದ್ಭವಿಸುವುದಿಲ್ಲ |
| ಊ | ಎಷ್ಟು ಜನ ರೈತರಿಗೆ ಬರ ಪರಿಹಾರ ವಿತರಿಸುವುದು ಬಾಕಿ ಇರುತ್ತದೆ ? (ತಾಲ್ಲೂಕುವಾರು ವಿವರ ನೀಡುವುದು) | ಉದ್ಭವಿಸುವುದಿಲ್ಲ |

ಕಂಇ 117 ಟಿಎನ್‌ಆರ್ 2021

**(ಆರ್. ಅಶೋಕ)**
ಕಂದಾಯ ಸಚಿವರು